## ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ | : | 517 (600) |
| ಸದಸ್ಯರ ಹೆಸರು | : | ಶ್ರೀ ಗೋವಿಂದ ರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 09.03.2026 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಬರ ಪರಿಸ್ಥಿತಿಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಶೈಕ್ಷಣಿಕ ವೆಚ್ಚವನ್ನು ಸರ್ಕಾರದಿಂದಲೇ ಭರಿಸಲಾಗುತ್ತಿದೆಯೆ: | ರಾಜ್ಯದಲ್ಲಿ ಬರ ಪರಿಸ್ಥಿತಿಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳ ಶೈಕ್ಷಣಿಕ ವೆಚ್ಚವನ್ನು ಸರ್ಕಾರದಿಂದಲೇ ಭರಿಸಲಾಗುತ್ತಿದೆ. |
| ಆ | ಹಾಗಿದ್ದರೆ ಕಳೆದ 5 ವರ್ಷಗಳಿಂದ ಇಲ್ಲಿಯವರೆಗೂ ಎಷ್ಟು ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವೆಚ್ಚವನ್ನು ಭರಿಸಲಾಗಿದೆ. ಸರ್ಕಾರದಿಂದ ಎಷ್ಟು ಹಣವನ್ನು ಒದಗಿಸಿದೆ ಹಾಗೂ ಎಷ್ಟು ಬಾಕಿ ಇದೆ; (ವಿವರ ಒದಗಿಸುವುದು) | 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕಳೆದ 5 ವರ್ಷದಿಂದ ಒಟ್ಟು 478 ವಿದ್ಯಾರ್ಥಿಗಳಿಗೆ ಒಟ್ಟು ರೂ.73,69,258/- (ಎಪ್ಪತ್ತ ಮೂರು ಲಕ್ಷದ ಅರವತ್ತೊಂಬತ್ತು ಸಾವಿರದ ಎರಡು ನೂರ ಐವತ್ತೆಂಟು ರೂಪಾಯಿಗಳು ಮಾತ್ರ) ಗಳನ್ನು ಶಿಕ್ಷಣ ಶುಲ್ಕ ಮತ್ತು ವಸತಿ ಶುಲ್ಕ ಮರುಪಾವತಿ ಮಾಡಲಾಗಿದೆ.<br>ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಕಳೆದ 5 ವರ್ಷಗಳಿಂದ 45 ವಿದ್ಯಾರ್ಥಿಗಳಿಗೆ ರೂ.12,58,563.00 ಗಳು (ಹನ್ನೆರಡು ಲಕ್ಷದ ಐವತ್ತೆಂಟು ಸಾವಿರದ ಐನೂರ ಅರವತ್ತ ಮೂರು ರೂಪಾಯಿಗಳು ಮಾತ್ರ) ಶಿಕ್ಷಣ ಶುಲ್ಕ ಮತ್ತು ವಸತಿ ಶುಲ್ಕ ಮರುಪಾವತಿ ಮಾಡಲಾಗಿದೆ. |
| ಇ | ರಾಜ್ಯದಲ್ಲಿ ಶೈಕ್ಷಣಿಕ ವೆಚ್ಚದ ಪರಿಹಾರ ನೀಡುವ ಯೋಜನೆಯು ಯಾವ ವರ್ಷದಿಂದ ಪ್ರಾರಂಭಗೊಂಡಿದೆ ಹಾಗೂ ಇದರ ಉದ್ದೇಶವೇನು; | ಈ ಯೋಜನೆಯು ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳ ಶಿಕ್ಷಣವನ್ನು ಮುಂದುವರೆಸಲು ಅನುಕೂಲವಾಗಲು ಶಿಕ್ಷಣ ಶುಲ್ಕ ಮತ್ತು ವಸತಿ ಶುಲ್ಕವನ್ನು 2016-17ನೇ ಸಾಲಿನಿಂದ ಅನ್ವಯಿಕವಾಗಿ ಮರುಪಾವತಿಸಲು ಕ್ರಮವಹಿಸಲಾಗಿರುತ್ತದೆ. |

| | | |
|---|---|---|
| ಈ | ಕಳೆದ 8 ವರ್ಷದಿಂದ ಇಲ್ಲಿಯವರೆಗೂ ಶೈಕ್ಷಣಿಕ ವೆಚ್ಚಕ್ಕಾಗಿ ಎಷ್ಟು ಅರ್ಜಿಗಳು ಸ್ವೀಕೃತವಾಗಿದೆ; ಎಷ್ಟು ಅರ್ಜಿಗಳು ತಿರಸ್ಕಾರಗೊಂಡಿದೆ ಹಾಗೂ ಅರ್ಹತೆ ಹೊಂದಲು ಇರುವ ಮಾನದಂಡವೇನು? | 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕಳೆದ 8 ವರ್ಷದಿಂದ ಇಲ್ಲಿಯವರೆಗೆ ಸಂಬಂಧಪಟ್ಟ ಉಪನಿರ್ದೇಶಕರುಗಳಿಂದ ಒಟ್ಟು 1270 ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, 1270 ವಿದ್ಯಾರ್ಥಿಗಳಿಗೂ ಶಿಕ್ಷಣ ಶುಲ್ಕ ಮತ್ತು ವಸತಿ ಶುಲ್ಕ ಮರುಪಾವತಿ ಮಾಡಿ ಇತ್ಯರ್ಥಪಡಿಸಲಾಗಿದೆ. ಪ್ರಸ್ತುತ ಯಾವುದೇ ಪ್ರಸ್ತಾವನೆಗಳು ಬಾಕಿ ಇರುವುದಿಲ್ಲ.<br><br>ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಕಳೆದ 8 ವರ್ಷಗಳಿಂದ 51 ವಿದ್ಯಾರ್ಥಿಗಳಿಗೆ ಶಿಕ್ಷಣ ಶುಲ್ಕ ಮತ್ತು ವಸತಿ ಶುಲ್ಕ ಮರುಪಾವತಿ ಮಾಡಲಾಗಿದೆ.<br><br>ಅರ್ಹತೆ ಹೊಂದಲು ಇರುವ ಮಾನದಂಡಗಳು<br>• ಪೋಷಕರ ಮತ್ತು ವಿದ್ಯಾರ್ಥಿಗಳ ಸಂಬಂಧದ ಬಗ್ಗೆ ಶಾಲಾ ವ್ಯಾಸಂಗ ದೃಢೀಕೃತ ಪ್ರತಿ (ಶಾಲಾ ದಾಖಲಾತಿ ಅಥವಾ ಎಸ್.ಎ.ಟಿ.ಎಸ್. ನಲ್ಲಿರುವಂತೆ).<br>• ಆಯಾ ವರ್ಷದ ಬೋಧನ ಶುಲ್ಕದ ರಶೀದಿ ಮತ್ತು ವಸತಿ ಶುಲ್ಕದ ರಶೀದಿ (ದೃಢೀಕರಿಸಿ ಸಲ್ಲಿಸುವುದು).<br>• FIR ಪ್ರತಿ (ದೃಢೀಕರಿಸಿ ಸಲ್ಲಿಸುವುದು).<br>• ಮರಣ ಪ್ರಮಾಣ ಪತ್ರ (ದೃಢೀಕರಿಸಿ ಸಲ್ಲಿಸುವುದು).<br>• ರೈತರು ಆತ್ಮಹತ್ಯೆ ಮಾಡಿಕೊಂಡ ಸಂದರ್ಭದಲ್ಲಿ ಸಾಲದ ಹೊರೆ ಆತ್ಮಹತ್ಯೆಗೆ ಕಾರಣವೆಂಬ ವಿಷಯವನ್ನು ಉಪವಿಭಾಗ ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯ ನಡವಳಿ ಪ್ರತಿ.<br>• ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಜಂಟಿ ನಿರ್ದೇಶಕರು, ಕೃಷಿ ಇಲಾಖೆ ಇವರು ರೈತರ ಮರಣಾನಂತರ ಪರಿಹಾರ ನೀಡುವ ಸಂದರ್ಭದಲ್ಲಿ ಕುಟುಂಬಕ್ಕೆ ನೀಡಲಾಗಿರುವ ರೂ.5.00 ಲಕ್ಷ ಪರಿಹಾರ ಮಂಜೂರಾತಿ ಆದೇಶ ಪ್ರತಿ.<br>• ವಿದ್ಯಾರ್ಥಿಯ ಗುರುತಿನ ಚೀಟಿ (ಐಡಿ) ಅಥವಾ ಪೋಷಕರು ಮತ್ತು ಮಗುವಿನ ಸಂಬಂಧವನ್ನು ದೃಢೀಕರಿಸುವ ಆಯಾ ಶಾಲಾ/ಕಾಲೇಜು ಮುಖ್ಯಸ್ಥರು ನೀಡಲಾದ ದೃಢೀಕರಣ ಪತ್ರದೊಂದಿಗೆ ಸಂಪೂರ್ಣ ಪ್ರಸ್ತಾವನೆಯನ್ನು ಸಂಬಂಧಿಸಿದ ಜಿಲ್ಲೆ ಉಪನಿರ್ದೇಶಕರು, ಶಾಲಾ ಶಿಕ್ಷಣ/ಪದವಿಪೂರ್ವ ಇವರಿಗೆ ಸಲ್ಲಿಸುವುದು. |

ಸಂಖ್ಯೆ:ಇಪಿ 61 ಯೋಯೋಕ 2026

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು